

# ಇಷ್ಟಪಟ್ಟು ಓದಿದರೆ ಯಾವುದೂ ಕಷ್ಟವಲ್ಲ

## ಕೆಎಎಸ್ ಟಾಪರ್ ಸಪ್ತಶ್ರೀ ಸಂದರ್ಶನ

■ ಶಶಿಕುಮಾರ್ ಸಿ.

**ಸಪ್ತಶ್ರೀ ಬಿ.ಕೆ 'ಕರ್ನಾಟಕ ಲೋಕಸೇವಾ ಆಯೋಗ' (ಕೆಪಿಎಸ್‌ಸಿ) ಈಚೆಗೆ ಪ್ರಕಟಿಸಿದ 'ಕೆಎಎಸ್' ಫಲಿತಾಂಶದಲ್ಲಿ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಈಚೆಗೆ ದಾಂಪತ್ಯ ಜೀವನಕ್ಕೂ ಕಾಲಿಟ್ಟಿರುವ ಅವರಿಗೆ ಯುಪಿಎಸ್‌ಸಿ ಪರೀಕ್ಷೆ ಪಾಸ್ ಮಾಡಿ ಭಾರತೀಯ ಆಡಳಿತ ಸೇವೆಗೆ (ಐಎಎಸ್) ಹೋಗುವ ಹೆಬ್ಬಯಕೆ. ತಮ್ಮ ಯಶಸ್ಸಿನ ಹಾದಿಯ ಏಳುಬೀಳುಗಳನ್ನು ಅವರು 'ಸುಧಾ' ಜೊತೆ ಹಂಚಿಕೊಂಡಿದ್ದಾರೆ.**

◆ **'ಕೆಪಿಎಸ್‌ಸಿ' ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಪಡೆದಿರುವಿರಿ. ನಿರೀಕ್ಷೆ ಮಾಡಿದ್ರಾ?**

ಖಂಡಿತಾ ಇಲ್ಲ. ಎಲ್ಲರಿಗೂ ಗೊತ್ತಿರುವಂತೆ ಇದು ಸ್ಪರ್ಧಾತ್ಮಕ ಪರೀಕ್ಷೆ. ಪರೀಕ್ಷೆ ಬರೆದ ಎಲ್ಲ ಅಭ್ಯರ್ಥಿಗಳು ನನ್ನಷ್ಟೇ ಅಥವಾ ನನಗಿಂತ ಮಿಗಿಲಾಗಿ ಅರ್ಹತೆ ಹೊಂದಿರುತ್ತಾರೆ. ಸಾಕಷ್ಟು ಪರಿಶ್ರಮ, ಶ್ರದ್ಧೆ ಹಾಗೂ ತಾಳ್ಮೆಯಿಂದ ಪರೀಕ್ಷೆಗೆ ತಯಾರಿ ನಡೆಸಿರುತ್ತಾರೆ. ಟಾಪರ್ ಸ್ಥಾನ ಒಂದು, ಎರಡು, ಮೂರು ಹೀಗೆ ಕೆಲ ಅಂಕಗಳ ಅಂತರದಲ್ಲಿ ನಿರ್ಧಾರವಾಗುತ್ತದೆ. ಹೀಗಾಗಿ ಮೊದಲ ರ್‍ಯಾಂಕ್ ನಿರೀಕ್ಷೆ ಮಾಡಿರಲಿಲ್ಲ.

ಆದರೆ, ನನ್ನ ಕಡೆಯಿಂದ ಈ ಪರೀಕ್ಷೆಗಂತೂ ಶೇಕಡ ನೂರರಷ್ಟು ತಯಾರಿ ನಡೆದಿತ್ತು. ಕೆಪಿಎಸ್‌ಸಿ ಆಯ್ಕೆಯ ಪಟ್ಟಿಯಲ್ಲಿ ನಾನಿರುತ್ತೇನೆ ಅನ್ನೋ ಅಚಲ ನಂಬಿಕೆ ಇತ್ತು. ಕೆಪಿಎಸ್‌ಸಿಯ ಉನ್ನತ ಹುದ್ದೆ ಸಿಗದಿದ್ದರೂ ಬೇರೆ ಹುದ್ದೆಯಾದರೂ ಸಿಗುವ ವಿಶ್ವಾಸವಿತ್ತು. ನಿರೀಕ್ಷೆಗೂ ಮೀರಿದ ಸ್ಥಾನ ಸಿಕ್ಕಿದೆ.

◆ **ಟಾಪರ್ ಆಗಿದ್ದೀರಿ. ಈ ಬಗ್ಗೆ ಏನನ್ನಿಸುತ್ತಿದೆ?**

ತುಂಬಾ ಖುಷಿಯಾಗುತ್ತಿದೆ. ಅಪ್ಪ–ಅಮ್ಮನ ನಂಬಿಕೆ ಉಳಿಸಿಕೊಂಡ ತೃಪ್ತಿ ಸಿಕ್ಕಿದೆ. ಇನ್ನೂ ಮುಂದಿನ ಹಂತಕ್ಕೆ ತಲುಪಲು ಸಾಕಷ್ಟು ಉತ್ಸಾಹವನ್ನು ಈ ಟಾಪರ್ ಸ್ಥಾನ ತುಂಬಿದೆ. ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಿದ್ದು, ಅದಕ್ಕೆ ಹೊಸ ಎನರ್ಜಿ ಸಿಕ್ಕಿದೆ. ಆ ಪರೀಕ್ಷೆಯನ್ನೂ ಪಾಸ್ ಮಾಡಬಲ್ಲೆ ಅನ್ನೋ ವಿಶ್ವಾಸ ಮೂಡಿದೆ.

◆ **ಈ ಸಾಧನೆಗೆ ಮನೆ ಹೇಗೆ ಸಹಕಾರಿ ಆಯಿತು?**

ಕೆಪಿಎಸ್‌ಸಿ ಪರೀಕ್ಷೆಯ ಎರಡನೇ ಪ್ರಯತ್ನದಲ್ಲೇ ನನಗೆ ಯಶಸ್ಸು ಸಿಕ್ಕಿದೆ. ಮೊದಲ ಪ್ರಯತ್ನದಲ್ಲಿ ಆದ ಹಿನ್ನಡೆಗಳಿಂದ ಸಾಕಷ್ಟು ಕಲಿತೆ. ದೃಢ ವಿಶ್ವಾಸದಿಂದ ಕಳೆದ ಬಾರಿ ಪರೀಕ್ಷೆ ಬರೆದೆ. ನಿರೀಕ್ಷೆಗೂ ಮೀರಿದ ಸ್ಥಾನ ನನಗೆ ಸಿಕ್ಕಿದೆ. ಅದಕ್ಕೆ ಕಾರಣ ನನ್ನ ಕುಟುಂಬ ಎನ್ನಬಹುದು.